# ಕರ್ನಾಟಕ ವಿಧಾನ ಪರಿಷತ್ತು

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 836 (906)
2. ಸದಸ್ಯರ ಹೆಸರು : ಶ್ರೀ ಕೆ.ಎ. ತಿಪ್ಪೇಸ್ವಾಮಿ (ನಾಮನಿರ್ದೇಶನ ಹೊಂದಿದವರು)
3. ಉತ್ತರಿಸಬೇಕಾದ ದಿನಾಂಕ : 22.02.2024
4. ಉತ್ತರಿಸುವ ಸಚಿವರು : ಮಾನ್ಯ ಉಪ ಮುಖ್ಯಮಂತ್ರಿಗಳು

| ಕ್ರ. ಸಂ | ಪ್ರಶ್ನೆಗಳು | ಉತ್ತರಗಳು |
|---|---|---|
| ಅ) | ಭದ್ರಾ ಮೇಲ್ದಂಡೆ ಯೋಜನೆಯನ್ನು ಯಾವಾಗ ಪ್ರಾರಂಭಿಸಲಾಯಿತು; ಈ ಯೋಜನೆಯ ಮುಖ್ಯ ಉದ್ದೇಶಗಳು ಯಾವುವು; ಪೂರ್ಣ ಮಾಹಿತಿ ನೀಡುವುದು; | ಭದ್ರಾ ಮೇಲ್ದಂಡೆ ಯೋಜನೆಗೆ 29.90 ಟಿಎಂಸಿ ನೀರನ್ನು ಹಂಚಿಕೆ ಮಾಡಲಾಗಿದ್ದು, ಮಧ್ಯ ಕರ್ನಾಟಕದ ಬರಪೀಡಿತ ಚಿತ್ರದುರ್ಗ, ತುಮಕೂರು, ಚಿಕ್ಕಮಗಳೂರು ಹಾಗೂ ದಾವಣಗೆರೆ ಜಿಲ್ಲೆಗಳಲ್ಲಿನ 2,25,515 ಹೆಕ್ಟೇರ್ (5,57,022 ಎಕರೆ) ಭೂ ಪ್ರದೇಶಕ್ಕೆ ಸೂಕ್ಷ್ಮ ನೀರಾವರಿ ಪದ್ಧತಿಯಲ್ಲಿ ನೀರಾವರಿ ಸೌಲಭ್ಯ ಕಲ್ಪಿಸಲು ಹಾಗೂ 367 ಕೆರೆಗಳಿಗೆ ಅವುಗಳ ಸಾಮರ್ಥ್ಯದ ಶೇ.50 ರಷ್ಟು ನೀರನ್ನು ತುಂಬಿಸುವ ಮುಖ್ಯ ಉದ್ದೇಶದಿಂದ ರೂಪಿಸಲಾಗಿದ್ದು, ಸದರಿ ಯೋಜನೆಯನ್ನು 2007-2008 ರಲ್ಲಿ ಪ್ರಾರಂಭಿಸಲಾಗಿದೆ. |
| ಆ) | ಈ ಯೋಜನೆ ಮೊದಲ ಅಂದಾಜು ವೆಚ್ಚವೆಷ್ಟು; ಹಾಗೂ ಪ್ರಸ್ತುತದಲ್ಲಿ ಪರಿಷ್ಕರಿಸಿದ ಅಂದಾಜು ಮೊತ್ತವೆಷ್ಟು; ಪೂರ್ಣ ಮಾಹಿತಿ ನೀಡುವುದು; ಈ ಯೋಜನೆಯಡಿ ಕಾರ್ಯಾರಂಭ ಮಾಡಿರುವ ಕೆಲಸಗಳು ಯಾವ ಹಂತದಲ್ಲಿವೆ; | ಭದ್ರಾ ಮೇಲ್ದಂಡೆ ಯೋಜನೆಗೆ ರೂ. 2813.00 ಕೋಟಿಗಳ ಯೋಜನಾ ವರದಿಗೆ ಸರ್ಕಾರಿ ಆದೇಶ ದಿನಾಂಕ:15.09.2008 ರಲ್ಲಿ ಆಡಳಿತಾತ್ಮಕ ಅನುಮೋದನೆಯನ್ನು ನೀಡಲಾಗಿತ್ತು.<br><br>ಪ್ರಸ್ತುತ, ಸದರಿ ಯೋಜನೆಗೆ ರೂ.21473.67 ಕೋಟಿಗಳ ಪುನರ್ ಪರಿಷ್ಕೃತ ಯೋಜನಾ ವರದಿಗೆ ಸರ್ಕಾರದ ಆದೇಶ ದಿನಾಂಕ: 16.12.2020 ರಲ್ಲಿ ಆಡಳಿತಾತ್ಮಕ ಅನುಮೋದನೆ ನೀಡಲಾಗಿದೆ.<br><br>ಈ ಯೋಜನೆಯಡಿ ಕಾರ್ಯಾರಂಭ ಮಾಡಿರುವ ಕೆಲಸಗಳ ಮಾಹಿತಿಯನ್ನು **ಅನುಬಂಧ**ದಲ್ಲಿ ಒದಗಿಸಲಾಗಿದೆ. |
| ಇ) | ಈ ಯೋಜನೆಯಡಿ ವಿವಿಧ ತಾಲ್ಲೂಕುಗಳಲ್ಲಿರುವ ಕೆರೆಗಳಿಗೆ ನೀರನ್ನು ಹರಿಸಲು ಯೋಜನೆ ರೂಪಿಸಲಾಗಿದೆಯೇ; (ಜಿಲ್ಲಾವಾರು ಮತ್ತು ತಾಲ್ಲೂಕುವಾರು ವಿವರಗಳನ್ನು ನೀಡುವುದು) | ಅನುಮೋದಿತ ಯೋಜನಾ ವರದಿಯಂತೆ ಭದ್ರಾ ಮೇಲ್ದಂಡೆ ಯೋಜನೆಯಿಂದ ನೀರನ್ನು ಹರಿಸುವ ಕೆರೆಗಳ ಜಿಲ್ಲಾವಾರು ಮತ್ತು ತಾಲ್ಲೂಕುವಾರು ವಿವರಗಳು ಈ ಕೆಳಗಿನಂತಿವೆ; |

| ಕ್ರ. ಸಂ | ಜಿಲ್ಲೆ | ತಾಲ್ಲೂಕು | ತುಂಬಿಸುವ ಕೆರೆಗಳ ಸಂಖ್ಯೆ |
|---|---|---|---|
| 1. | ಚಿಕ್ಕಮಗಳೂರು | ತರೀಕೆರೆ | 80 |
| | | ಕಡೂರು | 32 |
| 2. | ಚಿತ್ರದುರ್ಗ | ಹೊಸದುರ್ಗ | 27 |
| | | ಹೊಳಲ್ಕೆರೆ | 21 |
| | | ಹಿರಿಯೂರು | 32 |

| ಕ್ರ. ಸಂ | ಪ್ರಶ್ನೆಗಳು | ಉತ್ತರಗಳು |
|---|---|---|
| | | |

| | | | |
|---|---|---|---|
| | | ಚಿತ್ರದುರ್ಗ | 09 |
| | | ಚಳ್ಳಕೆರೆ | 51 |
| | | ಮೊಳಕಾಲ್ಮೂರು | 20 |
| 3. | ತುಮಕೂರು | ಸಿ.ಎನ್.ಹಳ್ಳಿ | 19 |
| | | ಸಿರಾ | 41 |
| | | ಪಾವಗಡ | 30 |
| 4. | ದಾವಣಗೆರೆ | ಜಗಳೂರು | 5 |
| | **ಒಟ್ಟು** | | **367** |

| ಕ್ರ. ಸಂ | ಪ್ರಶ್ನೆಗಳು | ಉತ್ತರಗಳು |
|---|---|---|
| ಈ) | ಭದ್ರಾ ಮೇಲ್ದಂಡೆ ಯೋಜನೆಯನ್ನು ರಾಷ್ಟ್ರೀಯ ಯೋಜನೆಯನ್ನಾಗಿ ಘೋಷಿಸುವ ಪ್ರಸ್ತಾವನೆ ಯಾವ ಹಂತದಲ್ಲಿದೆ ಮತ್ತು ಕೇಂದ್ರ ಸರ್ಕಾರ ಆಯವ್ಯಯದಲ್ಲಿ ಘೋಷಿತವಾದ ಅನುದಾನ ಬಿಡುಗಡೆ ಆಗಿದೆಯೇ; ಪೂರ್ಣ ಮಾಹಿತಿ ನೀಡುವುದು? | ಭದ್ರಾ ಮೇಲ್ದಂಡೆ ಯೋಜನೆಯನ್ನು ರಾಷ್ಟ್ರೀಯ ಯೋಜನೆಯನ್ನಾಗಿ ಘೋಷಿಸಲು ಕೇಂದ್ರ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿದ್ದು, ಕೇಂದ್ರ ಸರ್ಕಾರವು 2023-24ನೇ ಸಾಲಿಗೆ ಕೇಂದ್ರ ಆಯವ್ಯಯದಲ್ಲಿ ರೂ.5300 ಕೋಟಿ ಅನುದಾನ ಘೋಷಿಸಿರುತ್ತದೆ. ಅದರಂತೆ ಸದರಿ ಅನುದಾನವನ್ನು ರಾಷ್ಟ್ರೀಯ ಯೋಜನೆ/AIBP ಯೋಜನೆಯಡಿ ಶೀಘ್ರವಾಗಿ ಬಿಡುಗಡೆ ಮಾಡುವಂತೆ ದಿನಾಂಕ: 16.08.2023 ಮತ್ತು 20.12.2023 ರ ಪತ್ರಗಳಲ್ಲಿ ಕೇಂದ್ರ ಸರ್ಕಾರವನ್ನು ಕೋರಿದ್ದು, ಈ ಸಂಬಂಧ ಕೇಂದ್ರ ಸರ್ಕಾರದಿಂದ ಇದುವರೆವಿಗೂ ಅನುದಾನದ ಬಿಡುಗಡೆಯಾಗಿರುವುದಿಲ್ಲ. |

**ಸಂಖ್ಯೆ: ಜಸಂಇ 27 ಡಬ್ಲ್ಯೂಎಲ್ಎ 2024**

**(ಡಿ.ಕೆ.ಶಿವಕುಮಾರ್)**
**ಉಪ ಮುಖ್ಯಮಂತ್ರಿಗಳು**

# ಅನುಬಂಧ

**ಯೋಜನಾ ಕಾಮಗಾರಿಗಳ ಪ್ರಸ್ತುತ ಹಂತ:**

- **ಹಂತ-1:** ಪ್ರಥಮ ಹಂತದ ತುಂಗಾ ನದಿಯಿಂದ ಭದ್ರಾ ಜಲಾಶಯಕ್ಕೆ 17.40 ಟಿ.ಎಂ.ಸಿ. ನೀರನ್ನು ಲಿಫ್ಟ್ ಮಾಡುವ (ಪ್ಯಾಕೇಜ್-1 ಕಾಮಗಾರಿಯು ಪ್ರಗತಿಯಲ್ಲಿದೆ. ಇನ್ನುಳಿದಂತೆ ಭದ್ರಾ ಜಲಾಶಯದಿಂದ ಅಜ್ಜಂಪುರ ಸುರಂಗದವರೆಗೆ 29.90 ಟಿ.ಎಂ.ಸಿ. ನೀರನ್ನು ಲಿಫ್ಟ್ ಮಾಡುವ (ಪ್ಯಾಕೇಜ್-2) ಮತ್ತು ಅಜ್ಜಂಪುರ ಸುರಂಗ ನಿರ್ಮಾಣ ಮಾಡುವ (ಪ್ಯಾಕೆಜ್-3) ಕಾಮಗಾರಿಗಳು ಭೌತಿಕವಾಗಿ ಪೂರ್ಣಗೊಂಡಿರುತ್ತವೆ. ಯೋಜನೆಯಡಿ ಬರುವ ಪ್ಯಾಕೇಜ್-2 & 3ರ ಕಾಮಗಾರಿಗಳನ್ನು ಪೂರ್ಣಗೊಳಿಸಿ ಭದ್ರಾ ಜಲಾಶಯದಿಂದ ಅಜ್ಜಂಪುರ ಸುರಂಗದ ಮೂಲಕ 2019-2020ನೇ ಸಾಲಿನಿಂದ ವಾಣಿ ವಿಲಾಸ ಸಾಗರಕ್ಕೆ ನೀರನ್ನು ಹರಿಸಲಾಗಿರುತ್ತದೆ.

- **ಹಂತ-2**: ಎರಡನೇ ಹಂತದಲ್ಲಿ ಕೆಳಕಂಡ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗಿರುತ್ತದೆ.

  - **ತರೀಕೆರೆ ಏತ ನೀರಾವರಿ ಯೋಜನೆ**: ತರೀಕೆರೆ ತಾಲ್ಲೂಕಿನ 79 ಕೆರೆಗಳನ್ನು ತುಂಬಿಸಲು ಮತ್ತು 20150 ಹೆಕ್ಟೇರ್ ಪ್ರದೇಶಕ್ಕೆ (0.49 ಲಕ್ಷ ಎಕರೆ) ಸೂಕ್ಷ್ಮ ನೀರಾವರಿ ಪದ್ಧತಿಯಲ್ಲಿ ನೀರಾವರಿ ಕಲ್ಪಿಸುವ ರೂ.812.02 ಕೋಟಿಗಳ ಮೊತ್ತದ (2 ಪ್ಯಾಕೇಜ್‌ಗಳಲ್ಲಿ) ತರೀಕೆರೆ ಏತ ನೀರಾವರಿ ಯೋಜನಾ ಕಾಮಗಾರಿಗಳು ಪ್ರಗತಿಯಲ್ಲಿವೆ.

  - **ಚಿತ್ರದುರ್ಗ ಶಾಖಾ ಕಾಲುವೆ:** ಕಿ.ಮೀ 0 ರಿಂದ 134.597 ಕಿ.ಮೀ ರವರೆಗಿನ ಚಿತ್ರದುರ್ಗ ಶಾಖಾ ಕಾಲುವೆಯ ರೂ.1682.44 ಕೋಟಿಗಳ ಮೊತ್ತದ ಕಾಮಗಾರಿಯನ್ನು 12 ಪ್ಯಾಕೇಜ್‌ಗಳಲ್ಲಿ ಕೈಗೆತ್ತಿಕೊಂಡಿದ್ದು, ಕಾಮಗಾರಿಗಳು ವಿವಿಧ ಹಂತದಲ್ಲಿ ಪ್ರಗತಿಯಲ್ಲಿರುತ್ತವೆ.

  - **ತುಮಕೂರು ಶಾಖಾ ಕಾಲುವೆ**: ಕಿ.ಮೀ 0 ರಿಂದ 159.684 ಕಿ.ಮೀ ರವರೆಗಿನ ತುಮಕೂರು ಶಾಖಾ ಕಾಲುವೆಯ ರೂ.1135.20 ಕೋಟಿಗಳ ಮೊತ್ತದ ಕಾಮಗಾರಿಯನ್ನು 9 ಪ್ಯಾಕೇಜ್‌ಗಳಲ್ಲಿ ಕೈಗೆತ್ತಿಕೊಂಡಿದ್ದು, ಕಾಮಗಾರಿಗಳು ವಿವಿಧ ಹಂತದಲ್ಲಿ ಪ್ರಗತಿಯಲ್ಲಿರುತ್ತವೆ.

1. **ಸೂಕ್ಷ್ಮ ನೀರಾವರಿ :**

   - ಚಿತ್ರದುರ್ಗ ಶಾಖಾ ಕಾಲುವೆಯಡಿ 40749 ಹೆಕ್ಟೇರ್ ಪ್ರದೇಶಕ್ಕೆ ಸೂಕ್ಷ್ಮ ನೀರಾವರಿ ಸೌಲಭ್ಯ ಕಲ್ಪಿಸುವುದಕ್ಕಾಗಿ ರೂ.1848.44 ಕೋಟಿಗಳ ಮೊತ್ತದಲ್ಲಿ 3 ಪ್ಯಾಕೇಜ್ ಗಳಲ್ಲಿ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗಿದ್ದು, ಕಾಮಗಾರಿಗಳು ಪ್ರಗತಿಯಲ್ಲಿರುತ್ತವೆ.

   - ತುಮಕೂರು ಶಾಖಾ ಕಾಲುವೆಯಡಿ 84900 ಹೆಕ್ಟೇರ್ ಪ್ರದೇಶಕ್ಕೆ ಸೂಕ್ಷ್ಮ ನೀರಾವರಿ ಸೌಲಭ್ಯ ಕಲ್ಪಿಸುವುದಕ್ಕಾಗಿ ರೂ.3806.25 ಕೋಟಿಗಳ ಮೊತ್ತದಲ್ಲಿ 9 ಪ್ಯಾಕೇಜ್ ಗಳಲ್ಲಿ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗಿದ್ದು, ಕಾಮಗಾರಿಗಳು ಪ್ರಗತಿಯಲ್ಲಿರುತ್ತವೆ.